KARNATAKA REGIONAL ORGANISATION FOR SOCIAL SERVICE
KROSS

ಖಾಸಗಿ ಪ್ರಸಾರಕ್ಕಾಗಿ

# ಅಲೆಗಳು

ತ್ರೈ ಮಾಸಿಕ ಪತ್ರಿಕೆ

ಸಂಚಿಕೆ 39 | ಜುಲೈ – ಸೆಪ್ಟಂಬರ್ 2017



## ಜೀವಗೋಳದ ರಕ್ಷಣೆ
## ಅದು ನಮ್ಮೆಲ್ಲರ ಹೊಣೆ



ಮುಖ್ಯ ಸಂಪಾದಕರು

**ಫಾ. ಸೆಬಾಸ್ಟಿಯನ್ ಫರ್ನಾಂಡಿಸ್**

## ಒಳ ಪುಟಗಳಲ್ಲಿ :


☞ ಜಾಗತಿಕ ತಾಪಮಾನ ಏರಿಕೆ ಮತ್ತು ಹವಾಮಾನ ಬದಲಾವಣೆ

☞ ಕುರಿ ಸಾಕಿ ಬದುಕು ಬದಲಿಸಿದ ಯಂಕಮ್ಮ

☞ ವಾರ್ತಾ ವಿಶೇಷ


# ಓದುಗರೊಂದಿಗೆ ಕ್ಷಣ ಹೊತ್ತು . . . . . .

ಆತ್ಮೀಯರೇ.......

ಅಕ್ಟೋಬರ್ ತಿಂಗಳೆಂದೊಡನೆ ಮಹಾತ್ಮಾ ಗಾಂಧೀಜಿಯವರ ಹುಟ್ಟು ಹಬ್ಬ ನೆನೆಪಾಗುತ್ತದೆ. ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿಯವರು ಭಾರತದ ಜೀವ ನಾಡಿಯಾಗಿರುವ ಗ್ರಾಮಗಳ ಸಮಗ್ರ ಅಭಿವೃದ್ಧಿಯ ಕನಸನ್ನು ಕಂಡವರು. ಅವರು ಹೇಳುತ್ತಿದ್ದರು – ಹಳ್ಳಿಗಳ ಅಭಿವೃದ್ಧಿಯಾದರೆ ದೇಶದ ಅಭಿವೃದ್ಧಿ, ಅವರ ಈ ಕನಸನ್ನು ನನಸು ಮಾಡುವಲ್ಲಿ ಸ್ವಾತಂತ್ರ್ಯಾನಂತರದಲ್ಲಿ ಅನೇಕ ಪ್ರಯತ್ನಗಳು ನಡೆದಿವೆ, ಈಗಲೂ ನಡೆಯುತ್ತಿವೆ.

ನಮ್ಮ ದೇಶದ ಸಂವಿಧಾನ ಶಿಲ್ಪಿಗಳು ಸಮಾನತೆಯ ಭಾರತದ ಕನಸನ್ನು ಕಂಡಿದ್ದಾರೆ. ಸ್ವತಂತ್ರ ಭಾರತದ ಸಂವಿಧಾನವು ದೇಶದ ಪ್ರತಿಯೊಬ್ಬ ಪ್ರಜೆಗೂ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಸ್ವಾತಂತ್ರ್ಯವನ್ನು ಘೋಷಿಸಿದೆ. ಈ ಮೂಲಕ ಸಮ ಸಮಾಜವನ್ನು ಸ್ಥಾಪಿಸುವ ಗುರಿಯನ್ನು ಹೊಂದಿದೆ. ಭಾರತದ ಸಮುದಾಯವು ಸಾವಿರಾರು ವರ್ಷಗಳಿಂದ ಅಸಮಾನತೆಯನ್ನು ನಿರ್ಮೂಲ ಮಾಡಲು ಕಾರ್ಯನಿರತ ವಾಗಿವೆ. ಅದು ಆಸ್ತಿ, ಸಂಪನ್ಮೂಲ, ಉದ್ಯೋಗ ಮತ್ತು ಗೌರವ ಹೀಗೆ ಯಾವುದೇ ಆಗಿರಬಹುದು. ಅನೇಕ ಕಾರಣಗಳಿಂದ ಹಿಂದುಳಿದಿರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಮತ್ತು ಹಿಂದುಳಿದ ವರ್ಗಗಳಿಗೆ ಸೇರಿದ ಜನರು ಸಮುದಾಯದ ಮುಖ್ಯಧಾರೆಗೆ ಬರಬೇಕು. ಅದಕ್ಕೆ ತಿಳುವಳಿಕೆಯ ಕೊರತೆ, ವಿದ್ಯಾಭ್ಯಾಸದ ಕೊರತೆ, ಸಂಪರ್ಕ ಕೊರತೆ, ಅವಕಾಶಗಳ ಕೊರತೆಗಳೇ ಕಾರಣಗಳಾಗಿರಬಹುದು.

ನಮ್ಮ ಪ್ರಜಾಪ್ರಭುತ್ವ ಸರಕಾರಗಳು ಇವರ ಬೇಡಿಕೆಗಳನ್ನು ಪೂರೈಸಿ, ಬದುಕನ್ನು ಹಸನುಗೊಳಿಸಿ, ಇವರು ಸಮುದಾಯದ ಮುಖ್ಯವಾಹಿನಿಯೊಂದಿಗೆ ಬೆರೆಯಲು ಉತ್ತಮ ಆಶಯಗಳನ್ನು ಹೊಂದಿ, ಹಲವಾರು ಕಾರ್ಯಕ್ರಮಗಳನ್ನು, ಯೋಜನೆಗಳನ್ನು ರೂಪಿಸಿ, ಕಾರ್ಯರೂಪಕ್ಕೆ ತಂದು ಅನುಷ್ಠಾನಗೊಳಿಸುತ್ತಿವೆ. ಸಾಕಷ್ಟು ಅನುದಾನವನ್ನು ಖರ್ಚು ಮಾಡಲಾಗುತ್ತಿವೆ. ಆದರೂ ನಿರೀಕ್ಷಿತ ಫಲಿತಾಂಶ ಸಿಗುತ್ತಿಲ್ಲ ಎನ್ನುವ ಮಾತುಗಳು ಕೇಳಿಬರುತ್ತಿವೆ.

ಈ ಕಾರ್ಯಕ್ರಮಗಳನ್ನು ಅರ್ಹ ಜನರಿಗೆ ತಲುಪುವಂತೆ ಮಾಡುವ ಉದ್ದೇಶದಿಂದ ಮಾಹಿತಿಗಳನ್ನು ನೀಡಬೇಕಾಗಿದೆ. ಸಮುದಾಯಗಳ ತಳಹಂತದಲ್ಲಿರುವ ಜನರು ಸರಕಾರಗಳ ಎಲ್ಲ ರೀತಿಯ ಸೌಲಭ್ಯಗಳನ್ನು ಪಡೆದು ಮುಂದುವರಿಯುತ್ತಿರುವ ಜನರೊಡನೆ ಮುಖ್ಯವಾಹಿನಿಗೆ ಸೇರಿಕೊಳ್ಳಬೇಕಾಗಿದೆ. ಇಂಥವರ ಸಹಾಯಕ್ಕೆ ಸ್ಪಂದಿಸಬೇಕಾಗಿರುವುದು ಮುಂದುವರಿದ ಸಮಾಜದ ಕರ್ತವ್ಯವಾಗಿದೆ. ಒಟ್ಟಿನಲ್ಲಿ ಆತ್ಮಾಭಿಮಾನ ತುಂಬಿದ ಸ್ವಾವಲಂಬಿ ಗ್ರಾಮಗಳ ನಿರ್ಮಾಣ ನಮ್ಮ ಗುರಿಯಾಗಲಿ.

ಈ ಬಾರಿಯ ನಮ್ಮ ಅಲೆಗಳಲ್ಲಿ ಹವಾಮಾನ ಬದಲಾವಣೆ ಮತ್ತು ಜಾಗತಿಕ ತಾಪಮಾನದಲ್ಲಿ ಹೆಚ್ಚಳ, ಎಂಬ ಶೀರ್ಷಿಕೆಯಡಿಯಲ್ಲಿ ಮುಖ್ಯ ಲೇಖನ ನಿಮಗೆ ಸೇರುತ್ತಿದೆ. ನೈಸರ್ಗಿಕ, ಯಾಂತ್ರಿಕ, ಮಾನವ ಜೀವಿಗಳ ಚಟುವಟಿಕೆಗಳಿಂದ ಹೊರ ಹೊಮ್ಮುವ ಇಂಗಾಲಾಮ್ಲ, ಮಿಥೇನ್ ಮೊದಲಾದ ಹಸಿರುಮನೆ ಅನಿಲಗಳ ಪರಿಣಾಮವಾಗಿ ಭೂಮಿಯ ಹವಾಮಾನದಲ್ಲಿ ಉಂಟಾಗುವ ದೀರ್ಘಾವಧಿ ಮಾರ್ಪಾಡನ್ನು, ಹವಾಮಾನ ಬದಲಾವಣೆ ಎಂದು ಸ್ಥೂಲವಾಗಿ ವ್ಯಾಖ್ಯಾನಿಸಲಾಗುತ್ತಿದೆ. ನಮ್ಮ ಮುಂದಿನ ಜನಾಂಗದ ಭವಿಷ್ಯವನ್ನು ಗಮನದಲ್ಲಿರಿಸಿ, ಈ ಎಲ್ಲ ಸವಾಲು, ಸಮಸ್ಯೆಗಳಿಗೆ ಸುಸ್ಥಿರವಾದ ಪರಿಹಾರಗಳನ್ನು ಕಂಡುಕೊಳ್ಳುವುದು ಈ ಹೊತ್ತಿನ ತೀವ್ರ ಅಗತ್ಯವಾಗಿದೆ.

ಸೆಪ್ಟಂಬರ್ ತಿಂಗಳ ಮೊದಲವಾರದಲ್ಲಿ (1ರಿಂದ 7ನೇ ಸೆಪ್ಟಂಬರ್ 2017 ವರೆಗೆ) ರಾಷ್ಟ್ರೀಯ ಪೋಷಣಾ ಸಪ್ತಾಹವನ್ನು ರಾಷ್ಟ್ರದಾದ್ಯಂತ ಆಚರಿಸಿದ್ದೇವೆ. ಈ ವರ್ಷದ ರಾಷ್ಟ್ರೀಯ ಪೋಷಣಾ ಸಪ್ತಾಹದ ಘೋಷಣಾ ವಾಕ್ಯ **"ಶಿಶು ಮತ್ತು ಮಗುವಿಗೆ ಆಹಾರ ನೀಡುವ ಸರಿಯಾದ ಕ್ರಮಗಳು: ಮಗುವಿನ ಉತ್ತಮ ಆರೋಗ್ಯಕ್ಕೆ"** ಎಂಬುದಾಗಿದೆ. 'ಆರೋಗ್ಯವೇ ಭಾಗ್ಯ' ಎಂಬ ಮಾತಿದೆ. ಆರೋಗ್ಯವಂತ ವ್ಯಕ್ತಿ ಮಾತ್ರ ತನ್ನನ್ನು ತನ್ನ ಕುಟುಂಬವನ್ನು ಚೆನ್ನಾಗಿ ನೋಡಿಕೊಳ್ಳಬಲ್ಲ ಹಾಗೂ ಆರೋಗ್ಯವಂತ ಸಮಾಜದ ಏಳಿಗೆಗೆ ಹಾಗೆಯೇ ದೇಶದ ಉನ್ನತಿಗೆ ಕಾರಣವಾಗಬಲ್ಲ.

ನಮ್ಮ ಗುರಿ ಸರ್ವರಿಗೂ ಸಮ ಪಾಲು, ಸರ್ವರಿಗೂ ಸಮ ಬಾಳು ಎಂಬುದಾಗಿದೆ. "ಎಲ್ಲರೂ ಸುಖಿಗಳಾಗಲಿ, ಎಲ್ಲರೂ ಆರೋಗ್ಯ ಪೂರ್ಣರಾಗಿರಲಿ, ಎಲ್ಲರೂ ಒಳಿತನ್ನೇ ನೋಡಲಿ, ಎಲ್ಲರೂ ದುಃಖಗಳಿಂದ ಮುಕ್ತರಾಗಲಿ" ಇದೇ ನಮ್ಮ ಆಶಯ.

**ಫಾ. ಸೆಬಾಸ್ಟಿಯನ್ ಫರ್ನಾಂಡಿಸ್**
ನಿರ್ದೇಶಕರು – ಕ್ರಾಸ್ ಸಂಸ್ಥೆ, ಬೆಂಗಳೂರು

# ಜಾಗತಿಕ ತಾಪಮಾನ ಏರಿಕೆ ಮತ್ತು ಹವಾಮಾನ ಬದಲಾವಣೆ. – ಡಾ.ರಾಜಶೇಖರ್

## ಅ. ಜಾಗತಿಕ ತಾಪಮಾನ ಏರಿಕೆ:

ಸೂರ್ಯನಿಂದ ಬೀರಲ್ಪಟ್ಟ ಶಾಖದ ಅಲೆಗಳು ವಾತಾವರಣವನ್ನು ಹಾದು ಭೂಮಿಯ ಮೇಲೆ ಬಿದ್ದಾಗ ಆಗುವ ತಾಪಮಾನದ ಏರಿಕೆಯನ್ನು **ಜಾಗತಿಕ ತಾಪಮಾನ** ಎನ್ನಬಹುದು. ಹೀಗೆ ಭೂಮಿಯ ಮೇಲೆ ಬಿದ್ದಂತಹ ಶಾಖದ ಅಲೆಗಳು ಪುನಃ ವಾತಾವರಣಕ್ಕೆ ಪ್ರತಿ ಬಿಂಬಿತವಾಗಿ ಹಿಂತಿರುಗಿ ಸೂರ್ಯ ಮತ್ತು ಭೂಮಿಯ ಮಧ್ಯೆ ಆಕಾಶದಲ್ಲಿ ಲೀನವಾಗಬೇಕು, ಆದರೆ ಭೂಮಿಯ ಮೇಲ್ಪದರದಲ್ಲಿರುವ ಕೆಲವು ಅನಿಲಗಳು ಮತ್ತು ಮೋಡಗಳು ಪ್ರತಿಬಿಂಬಿತವಾದ ಶಾಖದ ಅಲೆಗಳನ್ನು ಹಿಡಿದಿಟ್ಟುಕೊಂಡು ಭೂಮಿಯ ತಾಪಮಾನವನ್ನು ಹೆಚ್ಚಿಸುತ್ತವೆ.

ಈ ಕ್ರಿಯೆಗೆ ಕಾರಣ ಕೆಲವು ಹಸಿರು ಮನೆ ಅನಿಲಗಳು (ಜಿ.ಹೆಚ್.ಜಿ.) ಉದಾ: ಇಂಗಾಲದ ಡೈ ಆಕ್ಸೈಡ್, ನೈಟ್ರಸ್ ಆಕ್ಸೈಡ್ (ನಗಿಸುವ ಅನಿಲ) ಕ್ಲೋರ್‌ಫ್ಲೂರೊಕಾರ್ಬನ್ಸ್ ಮತ್ತು ಮೀಥೇನ್. ಇತ್ತೀಚಿನ ಅಭಿವೃದ್ಧಿಯ ಶಕೆಯಲ್ಲಿ ಈ ಅನಿಲಗಳ ಸಾಂದ್ರತೆಯು ಅತ್ಯಧಿಕವಾಗಿ ವಾತಾವರಣದ ತಾಪಮಾನದಲ್ಲಿ ಏರಿಕೆಯಾಗಲು ಮೂಲಕಾರಣಗಳಾಗಿರುತ್ತವೆ.

ಈ ಮೇಲಿನ ಅನಿಲಗಳ ಸಾಂದ್ರತೆ ಹೆಚ್ಚಲು ಎರಡು ಕಾರಣ :

1. **ಸ್ವಾಭಾವಿಕ:** ಒಟ್ಟಾರೆ ಭೌಗೋಳಿಕ ಕ್ರಿಯೆಯಲ್ಲಿ ಉಂಟಾಗುವ ಏರು ಪೇರು ಉದಾ: ಋತುಮಾನದ ಬದಲಾವಣೆಗಳು, ವಾಯುಮಂಡಲದ ಚಲನೆ ಹಾಗು ಸಮುದ್ರದ ಸುಳಿಗಳ ದಿಕ್ಕು ಬದಲಿಸುವಿಕೆ ಇತ್ಯಾದಿ.

2. **ಮಾನವ ನಿರ್ಮಿತ:** ಪ್ರಮುಖವಾಗಿ ಹಸಿರು ಕ್ರಾಂತಿ ಕೈಗಾರಿಕಾ ಕ್ರಾಂತಿ, ಕ್ಷೀರ ಕ್ರಾಂತಿ ಮತ್ತು ಜನಸಂಖ್ಯಾ ಸ್ಫೋಟ ಇಂಥಹ ತಂತ್ರ ಜ್ಞಾನಗಳ ಆವಿಶ್ಕಾರಗಳಿಂದಾಗಿ ನಿಸರ್ಗದ ಮೇಲೆ ಅತ್ಯಂತ ಕ್ರೂರವಾದ ಪರಿಣಾಮ ಬೀರಿದೆ. ಇದಕ್ಕೆ ಉದಾಹರಣೆ ನಮ್ಮಿಂದಾದ ತಪ್ಪುಗಳ ಪರಿಣಾಮಗಳನ್ನು ನಾವೇ ಅನುಭವಿಸಲಾರಂಬಿಸಿದ್ದೇವೆ.

### ಹಸಿರುಕ್ರಾಂತಿ:

ವಾತಾವರಣದಲ್ಲಿ ಉಂಟಾಗುವ ತಾಪಮಾನದ ಏರಿಕೆಯಿಂದ ಹಲವಾರು ಏರು ಪೇರುಗಳು ಉಂಟಾಗಿ ಭೂಮಿಯ ಮೇಲೆ ವಾಸಿಸುತ್ತಿರುವ ಜೀವ ಸಂಕುಲಗಳ ನೆಲೆಗಳ ಮೇಲೆ ಅತಿ ಕ್ರೂರ ಪರಿಣಾಮ ಉಂಟಾಗಿ ಅವುಗಳ ಆಹಾರ, ಸಂತಾನೋತ್ಪತ್ತಿ ಹಾಗೂ ವಲಸೆ ಮುಂತಾದುವುಗಳು ಭಾಧಿಸಲ್ಪಟ್ಟಿರುತ್ತವೆ. ಇದಕ್ಕೆ ಕಾರಣ ಅಭಿವೃದ್ಧಿ ಹೆಸರಿನಲ್ಲಿ ಮಾನವ ನಿಸರ್ಗದ ಮೇಲೆ ದೂರದೃಷ್ಟಿ ಇಲ್ಲದೆ ಹೇರಿದ ಅತಿರೇಕಗಳು ಉದಾ: ಹಸಿರುಕ್ರಾಂತಿಯ ಹೆಸರಿನಲ್ಲಿ ನಿರ್ಮಾಣವಾದಂತಹ ಅಣೆಕಟ್ಟುಗಳು, ಯಥೇಚ್ಛವಾದ ರಾಸಾಯನಿಕ ಗೊಬ್ಬರ ಮತ್ತು ಕೀಟನಾಶಕಗಳ ಬಳಕೆ, ಕೃಷಿ ಭೂಮಿಯ ವಿಸ್ತರಣೆಯಿಂದಾಗಿ ಕಾಡು ನಾಶವಾಗುತ್ತದೆ. ಇವೆಲ್ಲವು ಒಂದಕ್ಕೊಂದು ಪೂರಕವಾಗಿ ಒಟ್ಟಾರೆ ಪರಿಣಾಮ ಇಂದಿನ ಈ ದುಸ್ಥಿತಿಗೆ ಕಾರಣ.

### ಕೈಗಾರಿಕಾ ಕ್ರಾಂತಿ:

ಕೈಗಾರಿಕಾ ಅಭಿವೃದ್ಧಿಗೆ ವಿಧ್ಯುಥಕ್ತಿಯ ಉತ್ಪಾದನೆಗಾಗಿ ವಿಧ್ಯುತ್ ಸ್ಥಾವರಗಳನ್ನು ಸ್ಥಾಪಿಸಲಾಯಿತು. ಇದರಲ್ಲಿ ಬಳಸುವ ಇಂಧನಗಳು ಅತ್ಯಂತ ಅಧಿಕ ಪ್ರಮಾಣದಲ್ಲಿ ಹಸಿರು ಮನೆ ಅನಿಲಗಳನ್ನು ಬಿಡುಗಡೆ ಮಾಡುತ್ತವೆ. ಸಂಪರ್ಕ ಸಾಧನಗಳ ಚಾಲನೆಗಾಗಿ ಬಳಸುವ ಇಂಧನಗಳಿಂದಲೂ ಸಹ ಸಾಕಷ್ಟು ಪ್ರಮಾಣದಲ್ಲಿ ವಾತಾವರಣದ ಹಾನಿಗೆ ಕಾರಣವಾಗಿರುತ್ತದೆ.

### ಕ್ಷೀರ ಕ್ರಾಂತಿ:

ಪ್ರಾಣಿಗಳ ಪಚನಕ್ರಿಯೆಯಿಂದ, ಸಾವಯವ ಗೊಬ್ಬರಗಳ ಕಳಿಯುವಿಕೆಯಿಂದ ಮತ್ತು ಕೆಲವು ಕೃಷಿ ಪದ್ಧತಿಗಳಿಂದ ಬಿಡುಗಡೆಯಾಗಿರುವ ಮೀಥೇನ್ ಎಂಬ ಅನಿಲ ವಾತಾವರಣದಲ್ಲಿ ಶೇಖರಣೆಯಾಗುತ್ತದೆ. ನಾವು ಬಳಸುವ ಐಷಾರಾಮಿ ಗೃಹಬಳಕೆಯ ವಸ್ತುಗಳಿಂದ ಬಿಡುಗಡೆಯಾಗುವ ಕ್ಲೋರ್‌ಫ್ಲೂರೊಕಾರ್ಬನ್ಸ್ ನಂತಹ ಅನಿಲಗಳು ಸಹ ವಾತಾವರಣದಲ್ಲಿ ಸೇರಿಕೊಳ್ಳುತ್ತವೆ. ಇದೆಲ್ಲದರ ಪರಿಣಾಮ ಭೂಮಿಯ ಮೇಲಿನ ಹಸಿರು ಮನೆ ಅನಿಲಗಳ ಸಾಂದ್ರತೆ ಹೆಚ್ಚಾಗಿ ವಾತಾವರಣದ ತಾಪಮಾನ ಹೆಚ್ಚಾಗಲು ಕಾರಣವಾಗುತ್ತದೆ.


ವಾತಾವರಣದಲ್ಲಿ ಅತ್ಯಂತ ತೀಕ್ಷ್ಣ ಪರಿಣಾಮ ಉಂಟಾಗಲು ಹಸಿರು ಮನೆ ಅನಿಲಗಳಲ್ಲಿ ಮೀಥೇನ್ ಅನಿಲವು ಪ್ರಮುಖ ಪಾತ್ರ ವಹಿಸುತ್ತದೆ, ಇದು ಇಂಗಾಲದ ಡೈ ಆಕ್ಸೈಡ್‌ಗಿಂತಲೂ 33 ಪಟ್ಟು ಸೂರ್ಯನಿಂದ ಬಂದ ಉಷ್ಣಾಂಷವನ್ನು ಹಿಡಿದಿಟ್ಟುಕೊಳ್ಳಬಲ್ಲದಾಗಿದೆ ಹಾಗು ಕಳೆದ 100 ವರ್ಷಗಳಲ್ಲಿ ಇದರ ಪ್ರಮಾಣ ಶೇ.145 ರಷ್ಟು ಅಧಿಕವಾಗಿದೆ. ಇಂಗಾಲದ ಡೈಆಕ್ಸೈಡ್‌ನಂತೆ ಇದು ನವೀಕರಣವಾಗದೆ ವಾತಾವರಣದಲ್ಲಿ ಸುಮಾರು 10 ವರ್ಷಗಳವರೆಗೆ ಉಳಿದಿರುತ್ತದೆ. ಈ ಎಲ್ಲ ಕಾರಣಗಳಿಂದ ವಾತಾವರಣದ ಉಷ್ಣಾಂಷವು ಏರಿಕೆ ಆಗುತ್ತಲೇ ಇರುತ್ತದೆ.

ಭೂಮಿಯ ಮೇಲೆ ಮಾನವ ತನ್ನ ಆಹಾರ ಉತ್ಪಾದನೆಗಾಗಿ ಏನೆಲ್ಲಾ ಪದ್ಧತಿಗಳನ್ನು ಅಳವಡಿಸಿದರೂ ವಾತಾವರಣದಲ್ಲಿನ ಉಷ್ಣಾಂಶದ ಏರಿಕೆ ಒಂದೇ ಮುಂದಿನ ಪೀಳಿಗೆಗೆ ಸವಾಲಾಗಿ ಉಳಿಯುತ್ತದೆ.

## ಬ. ಹವಾಮಾನ ಬದಲಾವಣೆ:

ಜಾಗತಿಕ ತಾಪಮಾನದಲ್ಲಿ ಆಗುವ ಏರಿಕೆಯ ಪರಿಣಾಮ

ಭೂಮಿಯ ಮೇಲ್ಪದರದಲ್ಲಾಗುವ ವಾತಾವರಣದ ಒಟ್ಟಾರೆ ಬದಲಾವಣೆಗಳನ್ನು ಹವಾಮಾನ ಬದಲಾವಣೆ ಎಂದು ಹೇಳಬಹುದು.




### ವಾತಾವರಣದಲ್ಲಿ ಇಂಗಾಲದ ಡೈ ಆಕ್ಸೈಡ್ ನ ಮೂಲ :

- ವಿಧ್ಯುಛಕ್ತಿ ಉತ್ಪಾದನೆಯಿಂದ ಶೇ.40%
- ಲಘುವಾಹನಗಳಿಂದ ಶೇ.20%
- ಭಾರಿ ವಾಹನಗಳಿಂದ ಶೇ.13%
- ವಾಯು ಸಂಚಾರದಿಂದ ಶೇ.3.5%
- ಕಟ್ಟಡ ಮತ್ತು ಇತರೇ ನಿರ್ಮಾಣಗಳಿಂದ ಶೇ.12%

### ಮೀಥೇನ್ ಅನಿಲದ ಮೂಲ:

- ಭತ್ತ ಬೆಳೆಯುವ ಪ್ರದೇಶದಿಂದ
- ಮೆಲಕು ಹಾಕುವ ಪ್ರಾಣಿಗಳಿಂದ,
- ಬ್ಯಾಕ್ಟೀರಿಯಾಗಳ ನಿರ್ವಾತ ಕ್ರಿಯೆಯಿಂದ
- ಪಳೆಯುಳಿಕೆ ಇಂಧನಗಳ ಉತ್ಪಾದನೆಯಿಂದ

### ನೈಟ್ರಸ್ ಆಕ್ಸೈಡ್‌ನ ಮೂಲ:

- ಸಾಗರಗಳು ಮತ್ತು ಅರಣ್ಯಗಳಿಂದ
- ನೈಲಾನ್ ಮತ್ತು ನೈಟ್ರಿಕ್ ಆಸಿಡ್‌ನ ಉತ್ಪಾದನೆಯಿಂದ
- ಕೃಷಿಯಲ್ಲಿ ರಾಸಾಯನಿಕ ಗೊಬ್ಬರಗಳ ಬಳಕೆಯಿಂದ

### ಸಾವಯವ ವಸ್ತುಗಳ ಸುಡುವಿಕೆಯಿಂದ

ಯಾವುದೇ ಪ್ರಾಣಿ ಅಥವಾ ಸಸ್ಯ ಭೂಮಿಯ ಮೇಲೆ ಜೀವಿಸಿರಬೇಕಾದರೆ ಭೂಮಿಯ ಮೇಲಿನ ಉಷ್ಣಾಂಶವು 15 ರಿಂದ 18 ಡಿಗ್ರಿ ಸೆಂಟಿಗ್ರೇಡ್ ಇರಬೇಕು ಮತ್ತು ವಾತಾವರಣದಲ್ಲಿ ಇಂಗಾಲದ ಡೈ ಆಕ್ಸೈಡ್‌ನ ಸಾಂದ್ರತೆಯು 0.03% ಇರಬೇಕು. ಇತರೇ ಗ್ರಹಗಳಾದ ಮಂಗಳಕ್ಕೆ ಹೋಲಿಸಿದರೆ ತಾಪಮಾನವು (ಮೈನಸ್) –50 ಡಿಗ್ರಿ ಸೆಂಟಿಗ್ರೇಡ್ ಹಾಗೂ ಇಂಗಾಲದ ಡೈ ಆಕ್ಸೈಡ್‌ನ ಸಾಂದ್ರತೆ ಭೂಮಿಗೆ ಅತ್ಯಂತ ನಿಕಟವಾಗಿ ಅಂಟಿಕೊಂಡಿದ್ದು ಯಾವುದೇ ಜೀವಿ ಜೀವಿಸಲು ಯೋಗ್ಯವಲ್ಲದಂತಾಗಿದೆ. ಹಾಗೆಯೇ ಶುಕ್ರ ಗ್ರಹಕ್ಕೆ ಹೋಲಿಸಿದರೆ ವಾತಾವರಣದ ಇಂಗಾಲದ ಡೈ ಆಕ್ಸೈಡ್‌ನ ಸಾಂದ್ರತೆಯು 96% ಇದ್ದು ವಿಶಾಲವಾದ ವಾತಾವರಣದಲ್ಲಿ ಹರಡಿರುತ್ತದೆ, ಮತ್ತು ತಾಪಮಾನವು +420 ಡಿಗ್ರಿ ಸೆಂಟಿಗ್ರೇಡ್ ಆಗಿದ್ದು ಯಾವುದೇ ಜೀವಿ ಜೀವಿಸಲು ಯೋಗ್ಯವಲ್ಲದ್ದಾಗಿರುತ್ತದೆ. ಹಾಗಾಗಿ ಭೂಮಿಯ ಮೂಲವಾತಾವರಣವು ದಿನೇ ದಿನೇ ಅಂದರೆ 200 ವರ್ಷಗಳಲ್ಲಿ ಇಂಗಾಲದ ಡೈ ಆಕ್ಸೈಡ್‌ನ ಸಾಂದ್ರತೆಯು 146 ಪಟ್ಟಾಗಿದ್ದು ವಾತಾವರಣದ ತಾಪಮಾನವು 1.ಡಿಗ್ರಿ ಸೆಂಟಿಗ್ರೇಡಿನಷ್ಟು ಏರಿಕೆಯಾಗಿ ಸಮುದ್ರಮಟ್ಟದಲ್ಲಿ 4–8 ಅಂಗುಲದಷ್ಟು ಏರಿಕೆಯಾಗಿರುತ್ತದೆ. ಮುಂದಿನ 100 ವರ್ಷಗಳಲ್ಲಿ 5.8 ಡಿಗ್ರಿ ಸೆಂಟಿಗ್ರೇಡ್ ತಾಪಮಾನ ಮತ್ತು ಸುಮಾರು 3 ಮೀಟರ್ ನಷ್ಟು ಸಮುದ್ರ ಮಟ್ಟದ ಏರಿಕೆಯಾಗುವ ಸಂಭವವು ಇರುತ್ತದೆ. 2100 ರ ವೇಳೆಗೆ ಭೂಮಿ ಎಂಬ ಗ್ರಹದ ಮೇಲೆ ಸಾಕಷ್ಟು ವ್ಯತ್ಯಾಸ ಉಂಟಾಗುತ್ತದೆ ಅವುಗಳಲ್ಲಿ ಹೆಚ್ಚಿನವು ಮಾನವ ಮತ್ತು ಪ್ರಾಣಿಸಂಕುಲಕ್ಕೆ ಹಾನಿಕಾರಕವೇ ಆಗಿರುತ್ತವೆ. ಅವುಗಳೆಂದರೆ:

- **ಕೃಷಿ:** ತಾಪಮಾನ ಏರಿಕೆಯಿಂದ ಸಸ್ಯ ಮತ್ತು ಪ್ರಾಣಿಗಳ ಜೀವನಚಕ್ರ ಮಾರ್ಪಾಟುಗೊಂಡು, ಚಳಿಯನ್ನು ಬಯಸುವ ಸಂಕುಲಗಳು ನಶಿಸಿಹೋಗಬಹುದು. ಮೀನುಗಾರಿಕಾ ಸಂಪತ್ತು ಒಟ್ಟಾರೆ ಬುಡಮೇಲಾಗುವ ಸಾಧ್ಯತೆ ಇದೆ.

- **ಕರಾವಳಿ ಪ್ರದೇಶ:** ಹಿಮಪರ್ವತಗಳ ಕರಗವಿಕೆಯಿಂದ ಸಮುದ್ರಮಟ್ಟದ ನೀರಿನ ಏರಿಕೆಯಾಗಿ ಸಣ್ಣಪುಟ್ಟ ದ್ವೀಪಗಳು ಮುಳುಗಡೆಯಾಗಿ ಸಮುದ್ರ ಕೊರೆತದಿಂದ ಕರಾವಳಿ ಪ್ರದೇಶಗಳು ನಾಶವಾಗುವ ಸಂಭವ ಹೆಚ್ಚು. ಸಮುದ್ರ ತೀರದಲ್ಲಿರುವ ಫಲವತ್ತು ಪ್ರದೇಶಗಳು ಮಲಿನಗೊಂಡು ನಾಶವಾಗುತ್ತದೆ.

- **ಪರಿಸರ ವ್ಯವಸ್ಥೆ:** ಭೂಮಿಯ ಮೇಲಿನ ಸೂಕ್ಷ್ಮ ಜೀವಿಗಳು ತಾಪಮಾನದ ಏರಿಕೆಯನ್ನು ಸಹಿಸದೆ ನಶಿಸಿಹೋಗುತ್ತವೆ. ಕಾಡ್ಗಿಚ್ಚು, ಪ್ರವಾಹಗಳು, ಬರಗಾಲಗಳಂತಹ ಪ್ರಕೃತಿಯ ವಿಕೋಪಗಳು ಸರ್ವೆ ಸಾಮಾನ್ಯವಾಗುತ್ತವೆ. ಉತ್ತರ ಮತ್ತು ದಕ್ಷಿಣ ದ್ರುವಗಳಲ್ಲಿ ವಾಸಿಸುವ ಪ್ರಾಣಿ ಪಕ್ಷಿಗಳು ಮರೆಯಾಗುತ್ತವೆ. ಸಸ್ಯ ಮತ್ತು ಪ್ರಾಣಿಗಳ ಜೀವನ ಚಕ್ರದಲ್ಲಿ ವ್ಯತ್ಯಾಸ ಉಂಟಾಗಿ ಅವುಗಳ ಗಾತ್ರ ಮತ್ತು ಉತ್ಪಾದನೆಯ ಶಕ್ತಿ ಕುಂಠಿತಗೊಳ್ಳುತ್ತವೆ.

- **ಇಂಧನ ಶಕ್ತಿ:** ತಾಪಮಾನದ ಏರಿಕೆಯಿಂದ ಬೇಸಿಗೆಯಲ್ಲಿ ತಾಪಮಾನವನ್ನು ಕಡಿಮೆಗೊಳಿಸಲು ಹೆಚ್ಚಿನ ಇಂಧನ ಶಕ್ತಿಯ ಅಗತ್ಯವಿರುತ್ತದೆ. ಹಾಗೆಯೇ ಚಳಿಗಾಲದಲ್ಲಿ ಶಾಖೋತ್ಪನ್ನಕ್ಕಾಗಿ ಹೆಚ್ಚಿನ ಇಂಧನ ಶಕ್ತಿ ಅಗತ್ಯವಿರುತ್ತದೆ. ಆದರೆ ನೀರಿನ ಕೊರತೆಯಿಂದ ವಿಧ್ಯುಕ್ತಿಯ ಉತ್ಪಾದನೆ ದುರ್ಲಭವಾಗುತ್ತದೆ.

- **ಅರಣ್ಯ ಪ್ರದೇಶ:** ತಾಪಮಾನದ ಏರಿಕೆಯಿಂದ

ಕಾಡ್ಗಿಚ್ಚು, ಬಿರುಗಾಳಿ, ಕೀಟ ಸಂಖ್ಯಾ ಸ್ಫೋಟದಿಂದ ಕಾಡುಗಳು ನಾಶವಾಗುತ್ತದೆ ಮತ್ತು ಇಂಗಾಲದ ಡೈಆಕ್ಸೈಡ್‌ನ ವ್ಯತ್ಯಯದಿಂದ ವಾಯು ಮಾಲಿನ್ಯಕ್ಕೆ ಕಾರಣವಾಗುತ್ತದೆ.

- **ಮಾನವ ಸ್ವಾಸ್ಥ್ಯ:** ಮಕ್ಕಳ ಮತ್ತು ವೃದ್ಧರ ಆರೋಗ್ಯದ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗುತ್ತದೆ. ರೋಗರುಜಿನಗಳ ತೀವ್ರತೆ ಹೆಚ್ಚಾಗುತ್ತದೆ. ಹೋಲಿಕೆಯಲ್ಲಿ ಗ್ರಾಮೀಣ ಪ್ರದೇಶಗಳು ನಗರ ಪ್ರದೇಶಗಳಿಗಿಂತ ತಂಪಾಗಿರುತ್ತವೆ. ಹಾಗಾಗಿ ನಗರ ಪ್ರದೇಶಗಳಲ್ಲಿನ ಜನಸಂಖ್ಯೆ ಹೆಚ್ಚಿನ ಆರೋಗ್ಯ ಸಮಸ್ಯೆಗಳಿಗೆ ತುತ್ತಾಗುತ್ತಾರೆ, ಭೂಮಿಯ ಮೇಲಿನ ಮೊದಲ ಹಂತದಲ್ಲಿ ಲಭ್ಯವಾಗುವ ಓಝೋನ್ ಅನಿಲವು ಆರೋಗ್ಯಕ್ಕೆ ಹಾನಿಕರವಾಗಿದ್ದು ವಯೋವೃದ್ಧರಲ್ಲಿ ಶ್ವಾಸ ಸಂಬಂಧೀ ಕಾಯಿಲೆಗಳಿಗೆ ಎಡೆಮಾಡಿಕೊಡುತ್ತವೆ. – ಆಸ್ತಮಾ. ನೀರು ಮತ್ತು ಕೀಟ ಸಂಬಂಧೀ ಹಾಗೂ ಸಾಂಕ್ರಾಮಿಕ ರೋಗಗಳು ಹೆಚ್ಚಾಗುತ್ತವೆ.

- **ಸಾರಿಗೆ ಮತ್ತು ಸಂಪರ್ಕ ವ್ಯವಸ್ಥೆ:** ತಾಪಮಾನದ ಏರಿಕೆಯಿಂದ ರಸ್ತೆ ರೈಲು ವಾಯು ಮತ್ತು ಸಮುದ್ರ ಯಾನಗಳಲ್ಲಿ ಸಾಕಷ್ಟು ವ್ಯತ್ಯಾಸಗಳು ಉಂಟಾಗುತ್ತವೆ.

- **ನೀರಿನ ಪೂರೈಕೆ:** ಕುಡಿಯುವ ನೀರಿನ ಮೂಲಗಳು ಮಲಿನಗೊಂಡು ಆರೋಗ್ಯದ ಮೇಲೆ ನೇರ ಪರಿಣಾಮವನ್ನು ಬೀರುತ್ತದೆ. ಬರಪೀಡಿತ ಪ್ರದೇಶಗಳು ಹೆಚ್ಚಾಗಿ ಕೃಷಿ ಪದ್ಧತಿಗಳಲ್ಲಿ ಏರುಪೇರಾಗುತ್ತದೆ.

## ಜಾಗತಿಕ ತಾಪಮಾನದಿಂದಾಗುವ ಒಳಿತು ಕೆಡುಕುಗಳು:

### ಒಳಿತು:

1. ಯಾವಪ್ರದೇಶದಲ್ಲಿ ಅತ್ಯಂತ ಶೀತ ಮತ್ತು ಕಡಿಮೆ ಕಾರ್ಬನ್ ಡೈ ಅಕ್ಸೈಡ್‌ನಿಂದ ಪ್ರಾಣಿ ಮತ್ತು ಸಸ್ಯ ಸಂಕುಲದ ಹಿನ್ನಡೆಯಾಗಿರುತ್ತದೋ ಅಲ್ಲಿ ಜಾಗತಿಕ ತಾಪಮಾನದ ಏರಿಕೆಯಿಂದ ಅನುಕೂಲವಾಗುತ್ತವೆ.


2. ದ್ರುವಗಳಲ್ಲಿ ಹಿಮಪರ್ವತಗಳ ಕರಗುವಿಕೆಯಿಂದ ಸಮುದ್ರ ಯಾನಕ್ಕೆ ಅನುಕೂಲ ವಾಗುತ್ತವೆ.

### ಕೆಡುಕುಗಳು:

1. ಸಮುದ್ರ ಮಟ್ಟದಲ್ಲಿ ಏರಿಕೆ
2. ಆಸಿಡ್ ಮಳೆ
3. ಮರುಭೂಮಿಗಳ ವಿಸ್ತರಣೆ
4. ಸಾಗರ ಸುಳಿಗಳಲ್ಲಿ ವ್ಯತ್ಯಯ

## ತಡೆಯಬಹುದೇ ಈ ಏರಿಕೆಯನ್ನು?

ಈ ಮೇಲ್ಕಂಡ ದುಷ್ಪರಿಣಾಮಗಳ ತೀಕ್ಷ್ಣತೆಯನ್ನು ಸ್ವಲ್ಪ ಮಟ್ಟಿಗಾದರೂ ಕಡಿಮೆಗೊಳಿಸಲು ಮನು ಕುಲವು ತುರ್ತಾಗಿ ಮಾಡಲೇಬೇಕಾದ ಅತಿ ಮುಖ್ಯ ಕ್ರಮಗಳು:




- ❖ ಹಸಿರುಕ್ರಾಂತಿ, ಕೈಗಾರಿಕಾಕ್ರಾಂತಿ, ಕ್ಷೀರ ಕ್ರಾಂತಿ ಮುಂತಾದುವುಗಳಿಂದ ಪಾಠ ಕಲಿತು ಈ ಹಿಂದೆ ಮಾಡಿದಂತಹ ತಪ್ಪುಗಳನ್ನು ಸರಿಪಡಿಸಿಕೊಳ್ಳಬೇಕು ಉದಾ: ಪಳೆಯುಳಿಕೆ ಇಂಧನಗಳ (ಪೆಟ್ರೋಲ್,ಡೀಸಲ್,ಆಯಿಲ್) ಬಳಕೆಯನ್ನು ಕಡಿಮೆ ಮಾಡಿ ನವೀಕರಿಸಬಹುದಾದ ಇಂಧನಗಳ ಬಳಕೆಯನ್ನು ರೂಢಿಸಿಕೊಳ್ಳಬೇಕು.
- ❖ ಹಸಿರು ಮನೆ ಅನಿಲಗಳ ಪ್ರಮಾಣ ಕಡಿಮೆಗೊಳಿಸಿಕೊಳ್ಳಬೇಕು
- ❖ ಯಾಂತ್ರೀಕೃತ ಕೃಷಿಗೆ ಪ್ರೋತ್ಸಾಹ ನೀಡಬೇಕು
- ❖ ಪಾರಂಪರಿಕ ಕೃಷಿ ಪದ್ಧತಿಗಳನ್ನು ಬಿಟ್ಟು ಪರ್ಯಾಯ ಕೃಷಿ ಪದ್ಧತಿಗಳನ್ನು ಅಳವಡಿಸಿಕೊಳ್ಳಬೇಕು
- ❖ ಐಷಾರಾಮಿ ಜೀವನ ಶೈಲಿಯನ್ನು ಬದಲಿಸಿಕೊಳ್ಳಬೇಕು



## ಅತೀ ವಂದನೀಯ ಡಾ. ಜಾರ್ಜ್ ಕಾಲಾಯಿಲ್‌ರವರಿಗೆ ಅಭಿನಂದನೆಗಳು

ಅತೀ ವಂದನೀಯ ಡಾ. ಜಾರ್ಜ್ ಕಾಲಾಯಿಲ್‌ರವರು ಸೆಪ್ಟಂಬರ್ 21, 2017 ರಂದು ಪುತ್ತೂರು ಧರ್ಮಕ್ಷೇತ್ರದ ಧರ್ಮಾಧ್ಯಕ್ಷರಾಗಿ ಕೇರಳದಲ್ಲಿ ದೀಕ್ಷೆ ಹೊಂದಿ ಅಧಿಕೃತವಾಗಿ ಸೆಪ್ಟಂಬರ್ 30, 2017 ರಂದು ಪುತ್ತೂರುನಲ್ಲಿ ಪೀಠಾರೋಹಣ ಮಾಡಿದರು. ಪೂಜ್ಯ ಧರ್ಮಾಧ್ಯಕ್ಷರಿಗೆ ಕ್ರಾಸ್ ಸಂಸ್ಥೆಯ ವತಿಯಿಂದ ಹೃತ್ಪೂರ್ವಕ ಶುಭಕಾಮನೆಗಳು.

# ಕುರಿ ಸಾಕಿ ಬದುಕು ಬದಲಿಸಿದ ಯಂಕಮ್ಮ



ಬೇಡರ ಕಾರ್ಲಕುಂಟೆ ಗ್ರಾಮವು ರಾಯಚೂರು ಜಿಲ್ಲೆಯ ಲಿಂಗಸ್ಗೂರು ತಾಲ್ಲೂಕು ಸಂತೆ ಕೆಲ್ಲೂರು ಗ್ರಾಮ ಪಂಚಾಯತಿ ವ್ಯಾಪ್ತಿಯ ಒಂದು ಗ್ರಾಮ. ಪರಿಶಿಷ್ಟ ಪಂಗಡಕ್ಕೆ ಸೇರಿದ ಕುಟುಂಬಗಳೇ ಹೆಚ್ಚಿರುವ ಈ ಗ್ರಾಮವು ಸುಮಾರು 1050 ಜನಸಂಖ್ಯೆಯನ್ನು ಹೊಂದಿದೆ. ಸಮಾಜದ ಬದಿಗೆ ಸರಿಸಲ್ಪಟ್ಟ ಈ ಸಮುದಾಯದ ಬಹುಸಂಖ್ಯಾತರು ಪಾರಂಪರಿಕ ಕೃಷಿ ಕೂಲಿ ಕಾರ್ಮಿಕರು. ಈ ಸಮುದಾಯದ ಜನರು ಶೈಕ್ಷಣಿಕವಾಗಿ ಮತ್ತು ಆರ್ಥಿಕವಾಗಿ ತುಂಬಾ ಹಿಂದುಳಿದವರಾಗಿದ್ದಾರೆ. ಇವರು ಶ್ರಮದ ಜೀವನವನ್ನು ನಡೆಸಿ ಕೂಲಿನಾಲಿ ಮಾಡಿ ಕಷ್ಟಪಟ್ಟು ದುಡಿದು ಬಂದಂತಹ ಸಂಪಾದನೆಯಲ್ಲಿ ತಮ್ಮ ಸಂಸಾರದ ನೊಗವನ್ನು ನೂಕುತ್ತ ಬಂದವರು.

ಈ ಜನರ ಆರ್ಥಿಕ ಮತ್ತು ಸಾಮಾಜಿಕ ಹಿಂದುಳಿಕೆಯನ್ನು ಕಂಡು ಬಳ್ಳಾರಿ ಧರ್ಮಕ್ಷೇತ್ರದ ಸಮಾಜ ಅಭಿವೃದ್ಧಿ ಸಂಸ್ಥೆ(ಬಿ ಡಿ ಡಿ ಎಸ್)ಯ ಸಿಬ್ಬಂಧಿ ವರ್ಗ ತಮ್ಮ ಸತತ ಪ್ರಯತ್ನದ ಮೂಲಕ ಇವರನ್ನು ಸಮಾಜದ ಮುಖ್ಯವಾಹಿನಿಗೆ ಸೇರಿಸಲು ಪ್ರೇರಣೆ ಮಾಡಲು ಪ್ರಾರಂಭಿಸಿದರು. ಶೈಕ್ಷಣಿಕವಾಗಿ ಮತ್ತು ಆರ್ಥಿಕವಾಗಿ ಸಬಲರಾದಾಗಲೇ ತಮ್ಮ ಅಭಿವೃದ್ಧಿ ಎನ್ನುವ ಮನೋಭಾವ ಈ ಸಮುದಾಯದ ಜನರಲ್ಲಿ ಮೂಡಿಸಿದರು. ಉತ್ಸಾಹಿ ಕೆಲ ಮಹಿಳೆಯರನ್ನು ಸ್ವಯಂ ಪ್ರೇರಿತರಾಗಿ ಸ್ವಸಹಾಯ ಸಂಘವನ್ನು ಹುಟ್ಟು ಹಾಕಿಸುವಲ್ಲಿ ಸಫಲರಾದರು. ಸ್ವಸಹಾಯ ಸಂಘವನ್ನು ಪ್ರಾರಂಭಿಸಿದ ಮೇಲೆ ಮಹಿಳೆಯರು ತಮ್ಮ ವಾರದ ದುಡಿಮೆಯನ್ನು ಅವಲಂಬಿಸಿ ಪ್ರತಿ ವಾರ ತಲಾ ಹತ್ತು ರೂಪಾಯಿಗಳಂತೆ ಉಳಿತಾಯವನ್ನು ಮಾಡುತ್ತ ತಮ್ಮ ಅಗತ್ಯ ಸಂದರ್ಭದಲ್ಲಿ ಅದನ್ನು ಸಾಲವಾಗಿ ಪಡೆದು ಅದನ್ನು ಮರುಪಾವತಿ ಮಾಡುತ್ತ ನಡೆಸಿಕೊಂಡು ಬಂದಿದ್ದರು.

ಸಂಘದ ಉದ್ದೇಶ ಉಳಿತಾಯದ ಮನೋಭಾವವಾಗಿದ್ದರೂ ಮಾಡಿರುವ ಮೊದಲ ಕೆಲಸವೆಂದರೆ ಇವರಿಗೆ ಬಹುದಿನದ ಕುಡಿಯುವ ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರ. ಇವರು ಕುಡಿಯುವ ನೀರಿಗಾಗಿ ಪ್ರತಿನಿತ್ಯ ಕಿಲೋಮೀಟರುಗಳಷ್ಟು ಕ್ರಮಿಸಿ ತಲೆಯ ಮೇಲೆ ಹೊತ್ತು ತರುತ್ತಿದ್ದರು. ಸಂಘ ಸಂಘಟಿಸಿದ ನಂತರ ಈ ಸಮಸ್ಯೆಯನ್ನು ಪರಿಹರಿಸಲು ಉಪಾಯಗಳನ್ನು ಹುಡುಕಲಾಗಿ ಮಹಿಳೆಯರೆಲ್ಲರೂ ಸಂಘದ ಮೂಲಕ ಸಂಘಟಿತರಾದರು. ಸಂಘದ ಸದಸ್ಯರೆಲ್ಲರೂ ಸೇರಿ ಗ್ರಾಮ ಪಂಚಾಯಿತಿಗೆ ಮನವಿ ಸಲ್ಲಿಸಿದರು. ಇವರು ಸತತ ಒತ್ತಡ ಹೇರಿದ ಕಾರಣ ಕೆಲವೇ ದಿನಗಳಲ್ಲಿ ಗ್ರಾಮ ಪಂಚಾಯಿತಿಯ ಸಾಮಾನ್ಯ ಸಭೆಯಲ್ಲಿ ಚರ್ಚೆ ನಡೆದು ಈ ಸಮಸ್ಯೆಗೆ ಒಂದು ಶಾಶ್ವತ ಪರಿಹಾರ ಹುಡುಕುವಲ್ಲಿ ಯಶಸ್ವಿಯಾದರು. ಇದರಂತೆ ತಮ್ಮ ಗ್ರಾಮದಲ್ಲಿ ಪ್ರತಿನಿತ್ಯವೂ ಎದುರಿಸುತ್ತಿದ್ದ ಕುಡಿಯುವ ನೀರಿನ ಸಮಸ್ಯೆಯನ್ನು ಹಂತಹಂತವಾಗಿ ಬಗೆಹರಿಸುವಲ್ಲಿ ಯಶಸ್ವಿಯಾದರು. ಈ ಯಶಸ್ಸಿನ ಹಿಂದೆ ಪಾತ್ರವಹಿಸಿದ ಸ್ವಸಹಾಯ ಸಂಘದ ಮಹಿಳೆಯರಲ್ಲಿ ಶ್ರೀಮತಿ ಯಂಕಮ್ಮ ಸಹ ಒಬ್ಬರು. ಕುಡಿಯುವ ನೀರಿನ ಸಮಸ್ಯೆ ನಿಯಂತ್ರಣಕ್ಕೆ ಬಂದ ಮೇಲೆ ನಿಟ್ಟುಸಿರು ಬಿಟ್ಟ ಮಹಿಳೆಯರು ನಂತರ ಹೆಜ್ಜೆ ಇಟ್ಟಿದ್ದು, ಉಳಿತಾಯ ಮಾಡಲು.

**ನಾಗರತ್ನ ಮಹಿಳಾ ಸ್ವಸಹಾಯ ಸಂಘ**ದ ಸದಸ್ಯೆ ಶ್ರೀಮತಿ ಯಂಕಮ್ಮ. ಸುಮಾರು 40 ವರ್ಷ ಪ್ರಾಯದ ಈಕೆ ವಿಧವೆ. ಮೂವರು ಸದಸ್ಯರನ್ನು ಒಳಗೊಂಡಿರುವ ಇವರ ಕುಟುಂಬದಲ್ಲಿ ದುಡಿಯುವವರು ಇವರೊಬ್ಬರೆ. ಸ್ಥಿರವಾಗಿ ಕೂಲಿ ಲಭಿಸುತ್ತಿಲ್ಲದ ಕಾರಣ ಜೀವನ ಬಹು ದುಸ್ತಿರವಾಗಿತ್ತು.

ಹೀಗಿರುವಾಗ ಸಮೃದ್ಧಿ ಯೋಜನೆಯಡಿಯಲ್ಲಿ ಬಿ ಡಿ ಡಿ ಎಸ್ ಸಂಸ್ಥೆಯ ಸಮುದಾಯ ಕಾರ್ಯಕರ್ತರು **ನಾಗರತ್ನ ಮಹಿಳಾ ಸ್ವಸಹಾಯ** ಸಂಘಕ್ಕೆ ಭೇಟಿ ನೀಡಿ ಅವರಿಗೆ ಅಗತ್ಯ ಮಾಹಿತಿಯನ್ನು ನೀಡಿ, ಆರ್ಥಿಕ ಸ್ವಾವಲಂಬನೆಯ ಚಟುವಟಿಕೆಯನ್ನು ಯಾಕೆ ತಾವು ನಡೆಸಬಾರದು? ಈ ಬಗ್ಗೆ ಯಾಕೆ ಸಂಘದವರು ಒಂದು ದೃಢ ನಿರ್ಧಾರ ತೆಗೆದು ಕೊಳ್ಳಬಾರದು ಎಂದು ಸಲಹೆ ಸೂಚನೆ ಹಾಗೂ ಮಾರ್ಗದರ್ಶನ ನೀಡಿದರು. ಅಲ್ಲದೇ ಆ ಸಂಘಕ್ಕೆ ಆರ್ಥಿಕ ಸ್ವಾವಲಂಬನಾ ಚಟುವಟಿಕೆಗಾಗಿ ಹದಿನೈದು ಸಾವಿರ ರೂ.ಗಳ ಸುತ್ತುನಿಧಿಯನ್ನು ಜಮಾ ಮಾಡಿದರು.

ಶ್ರೀಮತಿ ಯಂಕಮ್ಮನಿಗೆ ಯಾವುದೇ ಕೌಶಲ್ಯ ಇಲ್ಲದ ಕಾರಣ ಕುರಿ ಸಾಕಣಿಕೆಯಿಂದ ತನ್ನ ಕುಟುಂಬದ ಜೀವನ ಸಾಗಿಸಲು ಈಕೆಗೆ ಆತ್ಮ ವಿಶ್ವಾಸ ಮೂಡಿತು. ಮೊದಲಿಗೆ 15 ಸಾವಿರ ಸುತ್ತುನಿಧಿ ಹಣ ಹಾಗೂ ಉಳಿತಾಯ ಖಾತೆಯಿಂದ 10 ಸಾವಿರ ರೂ ಗಳನ್ನು ಸೇರಿಸಿ ಒಟ್ಟು 25 ಸಾವಿರ ರೂಪಾಯಿಗಳಿಗೆ 6 ಕುರಿಮರಿಗಳನ್ನು ಖರೀದಿಸುವ ಬಗ್ಗೆ ಸಂಘದ ಸಭೆಯಲ್ಲಿ ಚರ್ಚಿಸಿ ತಿರ್ಮಾನಿಸಲಾಯಿತು. ಅದರಂತೆ 25 ಸಾವಿರ ರೂಪಾಯಿಗಳಿಗೆ 2 ತಿಂಗಳ ಪ್ರಾಯದ 6 ಕುರಿಮರಿಗಳನ್ನು ಖರೀದಿಸಿ ಸುಮಾರು 8 ರಿಂದ 10 ತಿಂಗಳವರೆಗೆ ಸಾಕಿ, ಎರಡು ಬೆಳೆದ ಕುರಿಗಳನ್ನು ಮಾರಿ ಬಂದ ಆದಾಯದಲ್ಲಿ ಕುಟುಂಬ ನಿರ್ವಹಿಸುತ್ತಿದ್ದರು.

ಉಳಿದ ನಾಲ್ಕು ಕುರಿಗಳಿಂದ ಮರಿ ಹಾಕಿಸಿ, ಬೆಳೆಸಿ ಮಾರಿ, ಪುನಃ ಕುರಿಗಳನ್ನು ಕೊಂಡುಕೊಂಡು ಬೆಳೆಸುತ್ತಾ ಹೀಗೆ ಕುರಿ ವ್ಯವಸಾಯ ಮಾಡುತ್ತಾ ಲಾಭದಲ್ಲಿ ಕುಟುಂಬ ನಿರ್ವಹಿಸುತ್ತಿದ್ದರು.

ಬಿ ಡಿ ಡಿ ಎಸ್ ಸಂಸ್ಥೆಯ ಸಿಬ್ಬಂಧಿಯವರ ಮಾರ್ಗದರ್ಶನ, ಮೇಲ್ವಿಚಾರಣೆ ಹಾಗೂ ನಿರಂತರ ಅನುಸರಿಸುವಿಕೆ (ಫಾಲೋಅಪ್)ಯಿಂದಾಗಿ ಶ್ರೀಮತಿ ಯಂಕಮ್ಮ ಇಂದು ಆರ್ಥಿಕವಾಗಿ ಅಭಿವೃದ್ಧಿ ಹೊಂದುವಲ್ಲಿ ನೆರವಾಯಿತು. ನಿರಂತರವಾದ ಸಲಹೆ ಸೂಚನೆ ಹಾಗೂ ಮಾರ್ಗದರ್ಶನದಿಂದ ಶ್ರೀಮತಿ ಯಂಕಮ್ಮ ಒಂದಷ್ಟು ಹಣ ಉಳಿತಾಯ ಮಾಡುವಲ್ಲಿ ಯಶಸ್ವಿಯಾದರು. ತನ್ನ ಮಕ್ಕಳಿಗೆ ಸೂಕ್ತ ಶಿಕ್ಷಣ ಮತ್ತು ಪೌಷ್ಟಿಕ ಆಹಾರ ಕೊಡಲು ಸಾಧ್ಯವಾಯಿತು.

ಕುರಿ ಉದ್ದಿಮೆ ಲಾಭದಾಯಕ ಎಂದು ಕಂಡ ಶ್ರೀಮತಿ ಯಂಕಮ್ಮ ವ್ಯಕ್ತಿಗತವಾಗಿ ತರಬೇತಿಯನ್ನು ಪಡೆಯುವ ಮೂಲಕ ಸ್ವಾವಲಂಬಿಯಾಗಲು ಸಾಕಷ್ಟು ಶ್ರಮವಹಿಸಿದ್ದಾರೆ. ಈಕೆ ಈಗ ತಿಂಗಳಿಗೆ ಸುಮಾರು ರೂಪಾಯಿ 8,000/– ರಿಂದ ರೂಪಾಯಿ 10,000/–

ವರೆಗೆ ಆದಾಯ ಗಳಿಸುತ್ತಿದ್ದಾರೆ. ಶ್ರೀಮತಿ ಯಂಕಮ್ಮ ತನ್ನ ಯಶಸ್ಸಿನ ಬಗ್ಗೆ ಮಾತನಾಡುತ್ತಾ ಎಲ್ಲದಕ್ಕಿಂತ ಮುಖ್ಯವಾಗಿ ಮಾಡುವ ಛಲ ಹಾಗೂ ಇಚ್ಛಾಶಕ್ತಿ ಬೇಕು ಎನ್ನುತ್ತಾರೆ.

ಒಟ್ಟಾರೆಯಾಗಿ ಗ್ರಾಮದಲ್ಲಿ ಆರ್ಥಿಕ ಸ್ವಾವಲಂಬನೆಯ ಉದ್ದೇಶದಿಂದ ಒಗ್ಗಟ್ಟಾದ ಮಹಿಳೆ ಇಂದು ಸ್ವಸಹಾಯ ಸಂಘದ ಮೂಲಕ ಸ್ವಾವಲಂಬಿಯಾಗಿ ಇನ್ನೊಬ್ಬರಿಗೆ ಮಾದರಿಯಾಗಿದ್ದಾರೆ. ತನ್ನ ಯಶಸ್ವಿಗೆ ಕಾರಣರಾದ **ನಾಗರತ್ನ ಮಹಿಳಾ ಸ್ವಸಹಾಯ ಸಂಘಕ್ಕೆ, ಬಿ ಡಿ ಡಿ ಎಸ್ ಸಂಸ್ಥೆಗೆ, ಕ್ರಾಸ್ ಸಂಸ್ಥೆಯ ಸಮೃದ್ಧಿ ಯೋಜನೆಗೆ** ಶ್ರೀಮತಿ ಯಂಕಮ್ಮ ತನ್ನ ಮನದಾಳದ ನಮನಗಳನ್ನು ಸೂಚಿಸಿದ್ದಾರೆ.

## ವಾರ್ತಾ ವಿಶೇಷ – ಶ್ರೀ. ಕ್ಲೆಮೆಂಟ್ ಫೆರ್ನಾಂಡಿಸ್ ಮತ್ತು ಶ್ರೀ ರಿಚರ್ಡ್ ಮಾರ್ಟಿಸ್

### ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಒಕ್ಕೂಟ ರಚನೆಗೆ ತರಬೇತಿ – ಜುಲೈ 12–13,2017



ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಒಕ್ಕೂಟ ರಚನೆಗೆ ಪೂರ್ವಭಾವಿಯಾಗಿ ಸ್ವ ಸಹಾಯ ಸಂಘಗಳ ಮಹಿಳಾ ಪ್ರತಿನಿಧಿಗಳಿಗೆ ಎರಡು ದಿವಸಗಳ ಕಾರ್ಯಾಗಾರವನ್ನು ಕ್ರಾಸ್ ಸಂಸ್ಥೆಯಲ್ಲಿ ಆಯೋಜಿಸಲಾಗಿತ್ತು. ಕ್ರಾಸ್ ಸಂಸ್ಥೆಯ ನಿರ್ದೇಶಕರಾದ ವಂದನೀಯ ಸ್ವಾಮಿ. ಸೆಬಾಸ್ಟಿಯನ್ ಫರ್ನಾಂಡಿಸ್‌ರವರು ಪ್ರಾಸ್ತಾವಿಕ ಭಾಷಣ ಮಾಡಿದರು. ತಮ್ಮ ಭಾಷಣದಲ್ಲಿ ಸ್ವ ಸಹಾಯ ಸಂಘದ ಮಹಿಳೆಯರು ಹಕ್ಕು ಮತ್ತು ಸಮಾನತೆ ಕಡೆಗಣಿಸಿ ಆರ್ಥಿಕ ಸಬಲತೆಗೆ ಹೆಚ್ಚಿನ ಒತ್ತು ನೀಡುತ್ತಿದ್ದಾರೆ. ಇದರಿಂದಾಗಿ ಸಾಮುದಾಯಿಕ ಅಭಿವೃದ್ಧಿ ಕುಂಠಿತವಾಗುತ್ತದೆ. ಆದುದರಿಂದ ಮಹಿಳೆಯರು ಒಕ್ಕೂಟ ರಚಿಸಿ ನೀತಿ ನಿರೂಪಣೆ ಮತ್ತು ನಿರ್ಧಾರ ತೆಗೆದುಕೊಳ್ಳುವ ಪ್ರಕ್ರಿಯೆಗಳಲ್ಲಿ ಹೆಚ್ಚಿನ ಆಸಕ್ತಿ ವಹಿಸಬೇಕೆಂದು ಒತ್ತು ನೀಡಿದರು. ವಂ. ಸ್ವಾಮಿ ಪೌಸ್ತಿನ್ ಲೋಬೋ, ರಾಷ್ಟ್ರೀಯ ನಿರ್ದೇಶಕರು – ಪೋಂಟಿಫಿಕಲ್ ಮಿಷನ್ ಆರ್ಗನೈಶೇಷನ್ ಇವರು ಸಂಪನ್ಮೂಲ ವ್ಯಕ್ತಿಗಳಾಗಿ ಈ ಕಾರ್ಯಾಗಾರವನ್ನು ನಡೆಸಿಕೊಟ್ಟರು. ಎಲ್ಲಾ 14 ಪಾಲುದಾರ ಸಂಸ್ಥೆಗಳ ಒಟ್ಟು 70 ಪ್ರತಿನಿಧಿಗಳು ಈ ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು.



### ರಾಜ್ಯ ಮಟ್ಟದ ನ್ಯಾಯ ಮತ್ತು ಶಾಂತಿ ಆಯೋಗದ ಕಾರ್ಯಾಗಾರ – ಆಗಸ್ಟ್ 16,2017

ಈ ಕಾರ್ಯಾಗಾರದಲ್ಲಿ ಕರ್ನಾಟಕದ ವಿವಿಧ ಧರ್ಮ ಕ್ಷೇತ್ರಗಳಿಂದ ಒಟ್ಟು 40 ಪ್ರತಿನಿಧಿಗಳು ಭಾಗವಹಿಸಿದ್ದರು. ಕ್ರಾಸ್ ಸಂಸ್ಥೆಯ ನಿರ್ದೇಶಕರಾದ ವಂದನೀಯ ಸ್ವಾಮಿ. ಸೆಬಾಸ್ಟಿಯನ್ ಫರ್ನಾಂಡಿಸ್ ರವರು ಎಲ್ಲರಿಗೂ ಸ್ವಾಗತಿಸಿದರು. ಈ ಕಾರ್ಯಗಾರದ ಅಧ್ಯಕ್ಷತೆಯನ್ನು ಅತೀ ವಂದನೀಯ ಡಾ. ಜೆರಾಲ್ಡ್ ಐಸಾಕ್ ಲೋಬೋ, ಕ್ರಾಸ್ ಸಂಸ್ಥೆಯ ಅಧ್ಯಕ್ಷರು ಮತ್ತು ಉಡುಪಿ ಧರ್ಮ ಕ್ಷೇತ್ರದ ಧರ್ಮಾಧ್ಯಕ್ಷರು ವಹಿಸಿದರು. ವಂ. ಸ್ವಾಮಿ ಪೌಸ್ತಿನ್ ಲೋಬೋ, ರಾಷ್ಟ್ರೀಯ ನಿರ್ದೇಶಕರು – ಪೋಂಟಿಫಿಕಲ್ ಮಿಷನ್ ಸೊಸೈಟಿ ಇವರು ಅತಿಥಿಗಳಾಗಿ ಆಗಮಿಸಿದ್ದರು. ಈ ಕಾರ್ಯಾಗಾರವನ್ನು ನ್ಯಾಯ ಮತ್ತು ಶಾಂತಿ ಆಯೋಗದ ರಾಷ್ಟ್ರೀಯ ನಿರ್ದೇಶಕರಾದ ವಂ ಸ್ವಾಮಿ ಸ್ಟೀಫನ್ ಫರ್ನಾಂಡಿಸ್‌ರವರು ನಡೆಸಿಕೊಟ್ಟರು. ಕ್ರಾಸ್ ಸಂಸ್ಥೆಯ ಸಿಸ್ಟರ್ ಝೀಟಾರವರು ಕಾರ್ಯಕ್ರಮವನ್ನು ನಿರೂಪಿಸಿದರು.

### ಕ್ರಾಸ್ ಸಂಸ್ಥೆಯ ನಿರ್ದೇಶಕ ಮಂಡಳಿಯ ಸಭೆ – ಆಗಸ್ಟ್ 17,2017



ಕ್ರಾಸ್ ಸಂಸ್ಥೆಯ ನಿರ್ದೇಶಕ ಮಂಡಳಿಯ ಸಭೆಯು ಆಗಸ್ಟ್ 17,2017 ರಂದು ಕ್ರಾಸ್ ನಲ್ಲಿ ಜರುಗಿತು. ಈ ಸಭೆಯ ಅಧ್ಯಕ್ಷತೆಯನ್ನು ಅತೀ ವಂದನೀಯ ಡಾ. ಜೆರಾಲ್ಡ್ ಐಸಾಕ್ ಲೋಬೋ, ಕ್ರಾಸ್ ಸಂಸ್ಥೆಯ ಅಧ್ಯಕ್ಷರು ಮತ್ತು ಉಡುಪಿ ಧರ್ಮ ಕ್ಷೇತ್ರದ ಧರ್ಮಾಧ್ಯಕ್ಷರು ವಹಿಸಿದರು. ಕ್ರಾಸ್ ಸಂಸ್ಥೆಯ ಅಧ್ಯಕ್ಷರು ಸಭೆಗೆ ಆಗಮಿಸಿದ ಎಲ್ಲಾ ಆಹ್ವಾನಿತರನ್ನು ಆತ್ಮೀಯವಾಗಿ ಸ್ವಾಗತಿಸಿ ಸಭೆಯನ್ನು ಕ್ರಮ ಬದ್ಧವಾಗಿ ನಿರ್ವಹಿಸಿದರು. ಫಾ ಸೆಬಾಸ್ಟಿಯನ್ ಫರ್ನಾಂಡಿಸ್‌ರವರು ಕ್ರಾಸ್ ಸಂಸ್ಥೆಯ ಕಾರ್ಯದರ್ಶಿಗಳಾಗಿ ನಿರ್ದೇಶಕ ಮಂಡಳಿಯ ಸಭೆಗೆ ಮಾಹಿತಿಯನ್ನು ನೀಡಿದರು.

### ಕ್ರಾಸ್ ಸಂಸ್ಥೆಯ ವಾರ್ಷಿಕ ಮಹಾ ಸಭೆ – ಆಗಸ್ಟ್ 17,2017




ಕ್ರಾಸ್ ಸಂಸ್ಥೆಯ ವಾರ್ಷಿಕ ಮಹಾ ಸಭೆಯು ಆಗಸ್ಟ್ 17,2017ರಂದು ಕ್ರಾಸ್ ನಲ್ಲಿ ಜರುಗಿತು. ಈ ಸಭೆಯ ಅಧ್ಯಕ್ಷತೆಯನ್ನು ಅತೀ ವಂದನೀಯ ಡಾ.ಜೆರಾಲ್ಡ್ ಐಸಾಕ್ ಲೋಬೋ, ಕ್ರಾಸ್ ಸಂಸ್ಥೆಯ ಅಧ್ಯಕ್ಷರು ಮತ್ತು ಉಡುಪಿ ಧರ್ಮ ಕ್ಷೇತ್ರದ ಧರ್ಮಾಧ್ಯಕ್ಷರು ವಹಿಸಿದರು. ಅತೀ ವಂದನೀಯ ಡಾ.ಜೆರಾಲ್ಡ್ ಐಸಾಕ್ ಲೋಬೋರವರು ಸಭೆಗೆ ಆಗಮಿಸಿದ ಎಲ್ಲಾ ಆಹ್ವಾನಿತರನ್ನು ಆತ್ಮೀಯವಾಗಿ ಸ್ವಾಗತಿಸಿ ಸಭೆಯನ್ನು ಕ್ರಮಬದ್ಧವಾಗಿ ನಿರ್ವಹಿಸಿದರು. ಈ ಸಭೆಯಲ್ಲಿ ವಾರ್ಷಿಕ ವರದಿಯನ್ನು ಪರಿಶೀಲಿಸಿ ಒಮ್ಮತದಿಂದ ಅಂಗೀಕರಿಸಲಾಯಿತು. ಹಿಂದಿನ ಸಾಲಿನ ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸಲಾಯಿತು ಮತ್ತು ಮುಂದಿನ

ಸಾಲಿನ ಕ್ರಿಯಾ ಯೋಜನೆಗೆ ಮಹಾ ಸಭೆ ಒಪ್ಪಿಗೆ ನೀಡಿತು. 2016–17 ನೇ ಸಾಲಿನ ಕ್ರಾಸ್ ಸಂಸ್ಥೆಯ ವಾರ್ಷಿಕ ವರದಿಯನ್ನು ಪ್ರೊಫೆಸರ್ ರೀಟಾ ನೊರೊನ್ಹ ಇವರು ಔಪಚಾರಿಕವಾಗಿ ಬಿಡುಗಡೆ ಮಾಡಿದರು. ಅತೀ ವಂದನೀಯ ಡಾ.ಜೆರಾಲ್ಡ್ ಐಸಾಕ್ ಲೋಬೋ, ಕ್ರಾಸ್ ಸಂಸ್ಥೆಯ ಅಧ್ಯಕ್ಷರು ಸಭೆಯಲ್ಲಿ ಉಪಸ್ಥಿತರಿದ್ದ ಎಲ್ಲರಿಗೂ ವಂದನಾರ್ಪಣೆ ಮಾಡಿದರು.



## ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಸಂವಹನ – ಆಗಸ್ಟ್ 29,2017

ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಸಂವಹನ ಈ ಕುರಿತು ಒಂದು ದಿನದ ಕಾರ್ಯಾಗಾರವನ್ನು ಕ್ರಾಸ್ ಸಂಸ್ಥೆ ಬೆಂಗಳೂರು ಇದರ ಆಶ್ರಯದಲ್ಲಿ ಹಮ್ಮಿಕೊಳ್ಳಲಾಯಿತು. ಕರ್ನಾಟಕದ ವಿವಿಧ ಭಾಗಗಳಿಂದ 62 ಪ್ರತಿನಿಧಿಗಳು ಈ ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು. ಕ್ರಾಸ್ ಸಂಸ್ಥೆಯ ನಿರ್ದೇಶಕರಾದ ವಂದನೀಯ ಸ್ವಾಮಿ. ಸೆಬಾಸ್ಟಿಯನ್ ಫರ್ನಾಂಡಿಸ್‌ರವರು ಪ್ರಾಸ್ತಾವಿಕ ಭಾಷಣ ಮಾಡಿದರು. ತಮ್ಮ ಭಾಷಣದಲ್ಲಿ ನಾವು ಅಭಿವೃದ್ಧಿಯ ಹರಿಕಾರರಾಗಿ ವಿವಿಧ ಮಟ್ಟದಲ್ಲಿ ವಿವಿಧ ಅಧಿಕಾರಿಗಳೊಂದಿಗೆ ಸಂಪರ್ಕ ಮಾಡಬೇಕಾಗಿದ್ದು ಪರಿಣಾಮಕಾರಿ ಸಂವಹನಕಾರರಾಗಿ ಕಾರ್ಯ ನಿರ್ವಹಿಸಬೇಕಾಗಿದೆ ಎಂದರು ಶ್ರೀಯುತ ಕೃಷ್ಣಮೂರ್ತಿ ಕರ್ನಾಟಕ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ನಿರ್ದೇಶನಾಲಯದ ಸಂವಹನ ಅಧಿಕಾರಿಗಳು ಈ ಕಾರ್ಯಾಗಾರವನ್ನು ನಡೆಸಿಕೊಟ್ಟರು.

## ಗ್ರಾಹಕ ಹಕ್ಕುಗಳ ರಕ್ಷಣೆಯ ಬಗ್ಗೆ ಕಾರ್ಯಾಗಾರ – ಆಗಸ್ಟ್ 30,2017



ಕರ್ನಾಟಕದ ವಿವಿಧ ಭಾಗಗಳಿಂದ 62 ಪ್ರತಿನಿಧಿಗಳು ಈ ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು. ಶ್ರೀಯುತ ವರ್ಗೀಸ್‌ರವರು ಪ್ರಾಸ್ತಾವಿಕ ಭಾಷಣ ಮಾಡಿ ಗ್ರಾಹಕ ಹಕ್ಕುಗಳ ರಕ್ಷಣೆಯ ಕುರಿತು ಕಾನೂನಿನಲ್ಲಿ ಇರತಕ್ಕಂತಹ ಅವಕಾಶಗಳ ಬಗ್ಗೆ ವಿವರ ನೀಡಿದರು. ಶ್ರೀಯುತ ವೈ ಜಿ. ಮುರಳೀಧರನ್ ಅಧ್ಯಕ್ಷರು ಕ್ರಿಯೇಟ್ ಪ್ರತಿಷ್ಠಾನ ಈ ಕಾರ್ಯಾಗಾರವನ್ನು ನಡೆಸಿಕೊಟ್ಟರು. ಕ್ರಾಸ್ ಸಂಸ್ಥೆಯ ನಿರ್ದೇಶಕರಾದ ವಂದನೀಯ ಸ್ವಾಮಿ. ಸೆಬಾಸ್ಟಿಯನ್ ಫರ್ನಾಂಡಿಸ್‌ರವರು ಶಿಭಿರಾರ್ಥಿಗಳಿಗೆ ಕ್ರಿಯಾ ಯೋಜನೆ ತಯಾರಿಸಲು ಮಾರ್ಗದರ್ಶನ ನೀಡಿದರು.



## ಸರಕು ಮತ್ತು ಸೇವೆಗಳ ತೆರಿಗೆ ಕಾಯಿದೆ ಬಗ್ಗೆ ಕಾರ್ಯಾಗಾರ – ಸೆಪ್ಟಂಬರ್ 11, 2017

ಡಾ. ಎಮ್ ಕಂದಸ್ವಾಮಿ ಎಫ್ ಸಿ ಎ, ಇವರು ಸಂಪನ್ಮೂಲ ವ್ಯಕ್ತಿಗಳಾಗಿ ಈ ಕಾರ್ಯಾಗಾರವನ್ನು ನಡೆಸಿಕೊಟ್ಟರು. ಸಂಪನ್ಮೂಲ ವ್ಯಕ್ತಿಗಳು ನವೀಕರಿಸಿದ ಏಕ ರೂಪ ತೆರಿಗೆಯ ವಿವಿಧ ಪ್ರಕ್ರಿಯೆಗಳ ಬಗ್ಗೆ ಕೂಲಂಕುಶವಾಗಿ ವಿವರಣೆ ನೀಡಿದರು. ಈ ಸಭೆಯ ಅಧ್ಯಕ್ಷತೆಯನ್ನು ಅತೀ ವಂದನೀಯ ಡಾ. ಜೆರಾಲ್ಡ್ ಐಸಾಕ್ ಲೋಬೋ, ಕ್ರಾಸ್ ಸಂಸ್ಥೆಯ ಅಧ್ಯಕ್ಷರು ಮತ್ತು ಉಡುಪಿ ಧರ್ಮ ಕ್ಷೇತ್ರದ ಧರ್ಮಾಧ್ಯಕ್ಷರು ವಹಿಸಿದರು. ಪೂಜ್ಯರು ಇದಕ್ಕೆ ಪೂರಕವಾಗಿ ಆರ್ಥಿಕ ಬೆಳವಣಿಗೆಯಲ್ಲಿ ಪಾರದರ್ಶಕತೆಯ ಅವಶ್ಯಕತೆ ಬಗ್ಗೆ ಒತ್ತು ನೀಡಿದರು. ಕ್ರಾಸ್ ಸಂಸ್ಥೆಯ ಸಿಸ್ಟರ್ ಝೀಟಾರವರು ಈ ಕಾರ್ಯಕ್ರಮವನ್ನು ನಿರೂಪಿಸಿದರು. ವಂ. ಸ್ವಾಮಿ ಸಂತೋಷ್ ಭಾಪು, ಸೇವಾ ಸಂಗಮ– ಕಲ್ಬುರ್ಗಿ ಮತ್ತು ಆರ್ಬಿಟ್ ಸಂಸ್ಥೆಗಳ ನಿರ್ದೇಶಕರು ವಂದನಾರ್ಪಣೆ ಮಾಡಿದರು.

## ಲಿಂಗ ಸಂವೇದಿ ಕಾರ್ಯಾಗಾರ – ಸೆಪ್ಟಂಬರ್ 21–22, 2017



ಡಾ. ಪ್ರೊಫೆಸರ್ ರೀಟಾ ನೊರೊನ್ಹ ಇವರು ಸಂಪನ್ಮೂಲ ವ್ಯಕ್ತಿಗಳಾಗಿ ಈ ಕಾರ್ಯಾಗಾರವನ್ನು ನಡೆಸಿಕೊಟ್ಟರು. ಕರ್ನಾಟಕದ ವಿವಿಧ ಭಾಗಗಳಿಂದ 40 ಪ್ರತಿನಿಧಿಗಳು ಈ ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು. ಕ್ರಾಸ್ ಸಂಸ್ಥೆಯ ನಿರ್ದೇಶಕರಾದ ವಂದನೀಯ ಸ್ವಾಮಿ. ಸೆಬಾಸ್ಟಿಯನ್ ಫರ್ನಾಂಡಿಸ್‌ರವರು ಈ ಕಾರ್ಯಾಗಾರದ ಬಗ್ಗೆ ಮಾತನಾಡಿ ಶಿಬಿರಾರ್ಥಿಗಳು ಕೇವಲ ನಿರೀಕ್ಷಕರಾಗಿರದೆ ಸಕ್ರಿಯವಾಗಿ ಕಾರ್ಯಾಗಾರದಲ್ಲಿ ಭಾಗವಹಿಸಿ ಲಿಂಗ ಸಂವೇದಿ ಸಮುದಾಯ ನಿರ್ಮಾಣಕ್ಕೆ ಹೆಚ್ಚಿನ ಪಾತ್ರವಹಿಸಬೇಕು ಎಂದರು.

MISEREOR
IHR HILFSWERK

KARNATAKA REGIONAL ORGANISATION FOR SOCIAL SERVICE
KROSS


**ಪ್ರತಿಗಳಿಗಾಗಿ ಸಂಪರ್ಕಿಸಿ :**

**ಕರ್ನಾಟಕ ರೀಜನಲ್ ಆರ್ಗನೈಝೇಷನ್ ಫಾರ್ ಸೋಶಿಯಲ್ ಸರ್ವೀಸ್ (ಕ್ರಾಸ್)**

ಅಂಚೆ ಪೆಟ್ಟಿಗೆ – 8427 ನಂ. 58/6, 2ನೇ ಅಡ್ಡ ರಸ್ತೆ, ಡಕೋಸ್ಟ ಲೇಔಟ್, ವೀಲರ್ ರೋಡ್ ಬಡಾವಣೆ,
ಬೆಂಗಳೂರು 560084. ದೂರವಾಣಿ ಸಂಖ್ಯೆ : 080–25496812/13, ಇ–ಮೇಲ್ : krossdir@gmail.com
ವೆಬ್‌ಸೈಟ್ : www.krossbangalore.com